ಪ್ರೀತಿ ಇಟ್ಟುಕೊಂಡಿದ್ದಾರೆ ನಿಜ, ಆದರೆ ಅವರ ಗಂಡಂದಿರಿಗೆ ತಾನು ಯಾರು? ತಂಗಿಯರಲ್ಲೂ ಇದೆ ಪರಸ್ಪರ ಪೈಪೋಟಿ. ಒಬ್ಬಳಿಗೆ ಹತ್ತು ರೂಪಾಯಿ ಹೆಚ್ಚಿನ ಬೆಲೆಯ ಸೀರೆ ಕೊಡಿಸಿದರೂ ಇನ್ನೊಬ್ಬಳಿಗೆ ಕರುಬು. ತನಗಿಂತಾ ಅವಳ ಮೇಲೆ ಅಕ್ಕನ ಪ್ರೀತಿ ಹೆಚ್ಚು ಎನ್ನುವ ನಂಜು. ಅವರ ಮಕ್ಕಳ ಚೌಲದಲ್ಲಿರಲಿ, ಮುಂಜಿಯಲ್ಲಿರಲಿ, ತೂಕ ಹಾಕಿದಂತೆ ಸಮನಾದ ಪ್ರಾಶಸ್ತ್ಯ ಕೊಟ್ಟು ಉಡುಗೊರೆಗಳಿಂದ ಸಂತೃಪ್ತಿ ಪಡಿಸಿದ್ದಾಳೆ ಭಾಗ್ಯ. ಆದರೂ, ಒಂದು ಸಣ್ಣ ವಿಷಯಕ್ಕೂ ಅಸೂಯೆಯ ಕಿಡಿ ಹತ್ತಿಕೊಳ್ಳುತ್ತದೆ. ನಾಲಿಗೆಯಿಂದ ಉದುರಿ ಬೀಳುತ್ತದೆ. ನಗಣ್ಯ ವಿಷಯಗಳೂ ಬಣ್ಣ ಬಳಿದುಕೊಳ್ಳುವ ಪರಿ ಕಂಡರೆ ಭಾಗ್ಯನಿಗೆ ಅಚ್ಚರಿಯಾಗುತ್ತದೆ. ಅವಳಿಗೆ ಯಾರ ಹಂಗೇನಿಲ್ಲ. ಆದರೆ ಅಪರೂಪಕ್ಕೆ ಬರುವವರ ಮನಸ್ಸು ನೋಯಿಸಲು ಅವಳು ಸಿದ್ಧಳಿಲ್ಲ. ವನಿತನಿಗೆ ಮದುವೆ ಮಾಡಬೇಕೆಂಬ ಪ್ರಸ್ತಾಪ ತಂದಾಗಲೂ ಅಷ್ಟೇ, ಒಬ್ಬಳು ಹೇಳಿದ್ದನ್ನು ಮೀರಿದರೆ ಮತ್ತೊಬ್ಬಳ ಅಭಿಮಾನಭಂಗವಾಗುವುದೆಂಬ ವಿಷಯ ಅವಳಿಗೆ ಗೊತ್ತಿದೆ. ತಮ್ಮ ಪೈಕಿಯವರಿಗೆ ತಂಗಿಯ ಮದುವೆ ಮಾಡಿಸಿದರೆ ತಮ್ಮ ಕೋಡು ಮೇಲಾಗುತ್ತದೆಯೆಂಬ ಭಾವನೆ. ಸಣ್ಣವಳನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಂಡ ಲೆಕ್ಕ. ಒಡಹುಟ್ಟಿದವರು ಅಂದ ಮೇಲೆ ಒಬ್ಬರಿಗೊಬ್ಬರು ಹೊಂದಿಕೊಂಡು ಹೋಗಬೇಕೆಂದು ಭಾಗ್ಯನ ಅನಿಸಿಕೆ. ಯಾಕೋ ಅದು ಹಾಗಾಗದೆ, ಒಬ್ಬರ ಏಳಿಗೆಯನ್ನು ಮತ್ತೊಬ್ಬರು ಸಂಭ್ರಮಿಸದೆ, ಪೈಪೋಟಿ ಮಾಡುವುದು ಭಾಗ್ಯನ ಮಟ್ಟಿಗೆ ಅರ್ಥವಾಗದ ವಿಷಯ. ತಮ್ಮ ಮನೆಯಲ್ಲಿ ಮಾತ್ರಾ ಹೀಗಾ ಅಥವಾ ಸಂಬಂಧಗಳು ಇರುವುದೇ ಹೀಗಾ ಎಂಬುದು ಅವಳಿಗೆ ಒಡೆಯದ ಒಗಟು. ಅವಳ ಅನುಭವ ಅವಳದು. ಒಬ್ಬಳ ಮನೆಯಲ್ಲಿ ಒಂದು ದಿನ ಹೆಚ್ಚಿಗೆ ಉಳಿದುಕೊಂಡರೆ ಇನ್ನೊಬ್ಬಳಿಗೆ ಹಿತವಾಗದ ಇದೆಂತಾ ಪಾಲುದಾರಿಕೆ? ನಾಳೆ ವನಿತನಿಗೆ ಮದುವೆಯಾದರೆ ಅವಳೂ ಈ ಸಾಲಿಗೆ ಸೇರ್ಪಡೆಯಾಗಬಹುದು. ಮೂವರ ನಡುವೆ ಹಂಚಿ ಹೋಗಬೇಕು ತಾನು. ಯಾರ ಕಿನಿಸಿಗೂ ಕಾರಣವಾಗದಂತೆ ಕಟ್ಟೆಚ್ಚರದಿಂದ ಹೆಜ್ಜೆ ಇಡಬೇಕು. ಬೇಕೇ ಈ ರಗಳೆ? ಸಣ್ಣವಳ ಮದುವೆಯನ್ನು ಭಾಗ್ಯ ಮುಂದೆ ಮುಂದೆ ಹಾಕಲು ಇದೊಂದೇ ಕಾರಣವಲ್ಲ. ಒಳಗೆ ಇನ್ನೊಂದು ಸ್ವಾರ್ಥ ಇದೆ. ಅವಳು ಒಪ್ಪಿಕೊಳ್ಳಲು ಹಿಂಜರಿದರೂ ಬಹುಶಃ ನಿಜವಾದ ಕಾರಣ ಅದೇ. ವನಿತನಿಗೆ ಮದುವೆ ಮಾಡಿ ಕಳಿಸಿಕೊಟ್ಟರೆ ತಾನು ಹೇಳಕೇಳುವವರಿಲ್ಲದ ಅಂತರ್‌ಪಿಶಾಚಿ. ಹಿರಿಮಗಳಾಗಿ ಹುಟ್ಟಿದ್ದಕ್ಕೆ, ದುಡಿತದ ನೊಗಕ್ಕೆ ಹೆಗಲು ಕೊಟ್ಟಿದ್ದಕ್ಕೆ, ತನಗೆ ಮಾತ್ರ ಈ ಶಿಕ್ಷೆಯೇ? ಜವಾಬ್ದಾರಿ ಅನ್ನುವುದು ತನಗೆ ಮಾತ್ರ ಸೀಮಿತವೇ? ಚಿಕ್ಕವಳು ಇದರಲ್ಲಿ ಒಂದು ಪಾಲು ತೆಗೆದುಕೊಂಡರೆ ತಪ್ಪೇನು? ತನ್ನ ಸ್ವಯಾರ್ಜಿತವನ್ನು ಅವಳ ಹೆಸರಿಗೆ ಬರೆದು ಅವಳಿಗೆ ಬದುಕು ಕಲ್ಪಿಸಿಕೊಟ್ಟರೆ ಸರಿ. ಮುಂದೆ ಅದು ಉಳಿದವರ ಸಂತಾನಕ್ಕೆ ಹಂಚಿಕೆಯಾಗಬೇಕೆಂದು ದಾಖಲೆ ಮಾಡಿಟ್ಟರೆ ಸರಿ. ಹೀಗೆ ನಾನಾ ಸಕಾರಣಗಳಿಂದ, ಅಕಾರಣಗಳಿಂದ ಮುಂದೆ ಹಾಕಿದ ವನಿತನ ಮದುವೆ ಮುಂದುಮುಂದಕ್ಕೆ ತಳ್ಳಲ್ಪಡುತ್ತಾ, 'ಇದು ತಪ್ಪು ಹೆಜ್ಜೆ' ಎಂದು ಭಾಗ್ಯನಿಗೆ ಅನಿಸಿದಾಗಲೊಮ್ಮೆ ತಂಗಿಯ

